ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ.

ದಿನಾಂಕಃ 21.07.2026 ರಂದು ಡಿ.ಡಬ್ಲ್ಯೂ-1ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎಸ್ ಎಚ್ ವಕೀಲರಿಂದಃ**

5. ವಾದಿಗೆ ನಾಲ್ಕು ಜನ ಹೆಣ್ಣುಮಕ್ಕಳು ಎಂದರೆ ಸರಿ. ಸದರಿಯವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1 ರಲ್ಲಿ ಅರ್ಧ ಭಾಗದಲ್ಲಿ ಮನೆ ಮತ್ತು ಅರ್ಧ ಭಾಗ ಉಪಯೋಗಿಸುತ್ತಿದ್ದಾರೆ ಎಂದರೆ ಸರಿ. ಸದರಿ ಮನೆಯನ್ನು ನಾವೇ ಕಟ್ಟಿಸಿಕೊಟ್ಟಿರುತ್ತೇವೆ.

6. 2002 ರಲ್ಲಿ ದಾವಾ ಆಸ್ತಿ ಸಂಖ್ಯೆ 2 ನ್ನು ವಾದಿಯ ತಂದೆ ಹಾಗೂ ಪ್ರತಿವಾದಿಯವರ ತಂದೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಸ್ವಾಧೀನದಲ್ಲಿ ನಾವು ಇದ್ದೇವೆ ಎಂದರೆ ಸರಿ. ದಾವಾ ಆಸ್ತಿ ಸಂಖ್ಯೆ 1 ವಾದಿಯವರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ತುರುಮುರಿ ಗ್ರಾಮದಲ್ಲಿ ಮನೆ ಸಂಖ್ಯೆ 236 ನಮ್ಮ ಕುಟುಂಬದ ಆಸ್ತಿ ಇದೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿ ನಮ್ಮ ಮೂಲ ಪುರುಷನ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ಶೇರ ಸಂಖ್ಯೆ 10929 ನನ್ನ ತಂದೆಯ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಶೇರ ಮೊತ್ತದಲ್ಲಿ ವಾದಿಯವರಿಗೂ ಪಾಲು ಇದೆ ಎಂದರೆ ಸರಿಯಲ್ಲ. ಸದರಿ ಶೇರನ್ನು ವಾದಿಯವರು ತಂದೆಯೂ ಸಹ ಸೇರಿ ಬಂಡವಾಳ ಹೂಡಿದ್ದರು ಎಂದರೆ ಸರಿಯಲ್ಲ.

ದಾವಾ ಆಸ್ತಿ ಸಂಖ್ಯೆ 1 ನನ್ನ ತಂದೆ ಮತ್ತು ವಾದಿಯವರ ತಂದೆಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ 2016-17 ನೇ ಸಾಲಿನಲ್ಲಿ ಸದರಿ ದಾವಾ ಆಸ್ತಿ ಸಂಖ್ಯೆ 1 ರ ದಾಖಲೆಯನ್ನು ನಮ್ಮ ಹೆಸರಿಗೆ ಮಾತ್ರ ಮಾಡಿಕೊಂಡೆವು ಎಂದರೆ ಸರಿ. ಸದರಿ ದಾಖಲೆ ನಮ್ಮ ತಂದೆಯ ಹೆಸರಿನಲ್ಲಿ ಮಾತ್ರ ಇತ್ತು ಎಂದು ನುಡಿಯುತ್ತಾರೆ.

8. ಆಸ್ತಿ ಸಂಖ್ಯೆ 220/ಬ ನನ್ನ ತಂದೆ ಮತ್ತು ವಾದಿಯವರ ತಂದೆಗೆ ಹಂಚಿಕೆಯಾಗಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿ ಇಬ್ಬರಿಗೂ ಸಂಬಂಧಪಟ್ಟದ್ದು ಎಂದು ದಾಖಲೆಯಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 1 ನ್ನು ವಾದಿಯವರು ಉಪಯೋಗಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ವಾದಿಯವರಿಗೆ ದಾವಾ ಆಸ್ತಿಗಳು, ಮೇಲೆ ಹೇಳಿದ ಶೇರ ಮೊತ್ತದಲ್ಲಿ ಸಮಪಾಲು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.